# <u>*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು*</u>

**ಎಸ್‌ಸಿ.** 160/2023

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ ಶ್ರೀ ಕಿರಣ್.ಎಸ್ | | <u>*ಪ್ರಮಾಣ ಮಾಡಿಸಿದ ದಿನಾಂಕಃ*</u> |
| **ತಂದೆ/ಗಂಡನ ಹೆಸರು** | ಃ ಶ್ರೀ ಶಿವಶಂಕರ್.ಜಿ | | **13.03.2024** |
| **ವಯಸ್ಸು** | ಃ **29** **ವರ್ಷ** | | |
| **ವೃತ್ತಿ** | ಃ ಖಾಸಗಿ ಕಂಪನಿ ಕೆಲಸ | **ಪ್ರಾ.ಸಾ.** | ಃ **05** |
| **ವಾಸಸ್ಥಳ** | ಃ ಬೆಂಗಳೂರು | **ಚಾ.ಸಾ.** | ಃ **03** |

<u>**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**</u>

. ಮೃತ ಪ್ರಜ್ವಲ್ ಎನ್ನುವಾತನು ಅದ್ವೈತ ರೆಸಿಡೆನ್ಸಿ ಕಟ್ಟಡದ ಮೇಲಿಂದ ಬಿದ್ದು ಮರಣಹೊಂದಿದ್ದು. ದಿಃ***14.01.2022*** ರಂದು ಮೈಸೂರು ಮೆಡಿಕಲ್ ಕಾಲೇಜಿನಲ್ಲಿ ಆತನ ಶವ ಪಂಚನಾಮೆ ಮಾಡಿದ್ದರು. ಆ ಕಾಲಕ್ಕೆ ಪ್ರಜ್ವಲ್ ನ ಶವದ ಮೂಗಿನಿಂದ ರಕ್ತ ಬರುತ್ತಿತ್ತು, ಎಡಕೈನ ಮೊಣಕೈ ಮೂಳೆ ಮುರಿದಿತ್ತು, ಎಡಕಾಲಿನ ಮಂಡಿಯಿಂದ ಕೆಳಭಾಗ ಮುರಿದಿತ್ತು. ಆ ಕಾಲಕ್ಕೆ ಶವಾಗಾರದ ಬಳಿ ಪಂಚನಾಮೆಗೆ ನನ್ನ ಸಹಿ ಪಡೆದಿದ್ದರು. ಈಗ ನಾನು ನೋಡುತ್ತಿರುವ ನಿ.ಪಿ-***6*** ಮತ್ತು ***7*** ದಾಖಲೆಗಳು ಆ ಕಾಲಕ್ಕೆ ನಾನು ಸಹಿ ಮಾಡಿದ್ದ ದಾಖಲೆಗಳು ಇವೆ ಮತ್ತು ಅವುಗಳಲ್ಲಿನ ಸಹಿಗಳು ನನ್ನವೇ ಇವೆ. ಸದರಿ ಸಹಿಗಳನ್ನು ನಿ.ಪಿ-***6(ಬಿ)*** ಮತ್ತು ***7(ಬಿ)*** ಎಂದು ಗುರುತಿಸಿದೆ. ಪ್ರಜ್ವಲ್ ನು ಮಹದೇವ ಎನ್ನುವವರ ಹೆಂಡತಿ ಜೊತೆ ಪೋನ್ ನಲ್ಲಿ ಮಾತನಾಡುತ್ತಿದ್ದರಿಂದ ಮಹದೇವ ಮತ್ತು ಆತನ ಜೊತೆ ಬಂದಿದ್ದ ***4-5*** ಜನ ಆತನಿಗೆ ಹೊಡೆದು ಸಾಯಲು ಪ್ರಚೊದನೆ ಮಾಡಿದ್ದರಿಂದ ಕಟ್ಟಡದ ಮೇಲಿಂದ ಬಿದ್ದು ಮರಣಹೊಂದಿದ್ದಾನೆ ಎಂದು ಗೊತ್ತಾಗಿತ್ತು. ಸಾಕ್ಷಿ ಪುನಃ ಹೇಳುತ್ತಾರೆ ಪೋನ್ ನಲ್ಲಿ ಸೋಮಶೇಖರನ ಹೆಂಡತಿ ಜೊತೆ

ಮಾತನಾಡುತ್ತಿದ್ದ ಮಹದೇವನ ಹೆಂಡತಿ ಜೊತೆ ಅಲ್ಲ ಎಂದು ಈಗ ಗೊತ್ತಾಗಿದೆ. ಆ ದಿನ ಬೆ.*9.30* ರಿಂದ *11.30* ರ ವರೆಗೆ ಶವ ಪಂಚನಾಮೆ ಮಾಡಿದ್ದರು ಆ ಕಾಲಕ್ಕೆ ಖಲೀಲ್, ಕಿರಣ್.ಎಸ್ ಮತ್ತು ಪ್ರಜ್ವಲ್ ನ ಸಂಬಂಧಿಕರು ಹಾಜರಿದ್ದರು.

**ಪಾಟೀ ಸವಾಲು : ಆರೋಪಿ ಪರ ವಕೀಲರು ಸಮಯ ಕೋರಿದ್ದರಿಂದ ಮುಂದೂಡಲಾಯಿತು.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ ಎ ಒ.,

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
**ಮೈಸೂರು**